**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 95/2020**

**ಚಾ.ಸಾಃ 14, ಫ್ರಾ.ಸಾಃ 06**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಮತಿ ಸಾವಿತ್ರಿ ನಾಯ್ಕ |
| ಗಂಡನ ಹೆಸರು | ಆನಂದು ನಾಯ್ಕ |
| ವಯಸ್ಸು | 52 ವರ್ಷಗಳು |
| ಉದ್ಯೋಗ | ಆರಕ್ಷಕ ಉಪ-ನಿರೀಕ್ಷಕರು, ಕುಮಟಾ ಪೋಲೀಸ್ ಠಾಣೆ |
| ವಾಸ್ತವ್ಯ | ಕುಮಟಾ |

**ಸಾಕ್ಷಿಯನ್ನು ದಿನಾಂಕಃ 06-02-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅಗಸ್ಟ-2018 ರಿಂದ ಮೇ-2022 ರ ವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕಳಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ **25-01-2019** ರಂದು ಸಂಜೆ **04-30** ಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ಸಂಖ್ಯೆ **30/2019** ರಂತೆ ಪ್ರಕರಣ ದಾಖಲಿಸಿರುತ್ತೇನೆ. ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ನಿಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ದಿನಾಂಕ 26-01-2019 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ತಯಾರಿಸಿರುತ್ತೇನೆ. ಹಾಗೂ ಸ್ಥಳದಲ್ಲಿ 2 ಭಾವಚಿತ್ರ ತಯಾರಿಸಿರುತ್ತೇನೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಫೋಟೋವನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-8 ಮತ್ತು 2 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 31-07-2020 ರಂದು ಸಂಜೆ 04-00 ಗಂಟೆಗೆ ಚಾಸಾ-13 ರವರು ಕಡತೋಕಾ ಜಡ್ಡಿಗದ್ದೆ ಕ್ರಾಸ್ ಹತ್ತಿರ ಗಸ್ತು ಕಾಲಕ್ಕೆ ಅನುಮಾನದಿಂದ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಿಡಿದು ಠಾಣೆಗೆ ತಂದು ವಿಚಾರಿಸಿದಾಗ ಆರೋಪಿತರು ಈ ಪ್ರಕರಣದಲ್ಲಿಯೂ ಕಳ್ಳತನ

ಮಾಡಿರುವುದನ್ನು ಒಪ್ಪಿಕೊಂಡಿದ್ದು ಸದರಿ ಆರೋಪಿತರನ್ನು ಚಾಸಾ-13 ರವರು ಬಂಧಿಸಿ ವಿಚಾರಣೆ ಕೈಗೊಂಡಿರುತ್ತಾರೆ.

ದಿನಾಂಕ 04-08-2020 ರಂದು ಚಾಸಾ-13 ರವರ ಆದೇಶದಂತೆ ಆರೋಪಿತರು ಕಳುವು ಮಾಡಿದ್ದ ಸ್ಥಳದ ಸ್ಥಳ ಪಂಚನಾಮೆಯನ್ನು ಮಾಡಿಕೊಂಡು ಬರುವಂತೆ ಆದೇಶಿಸಿದ್ದು ಅದರಂತೆ ಪಂಚರೊಂದಿಗೆ ಆರೋಪಿತರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಆರೋಪಿತರು ತೋರಿಸಿದ ಸ್ಥಳದಲ್ಲಿ ಪುನಃ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡುತ್ತಿದ್ದು ನಿಪಿ-1(ಸಿ) ಎಂದು ಗುರುತಿಸಲಾಯಿತು.

ದಿನಾಂಕ 05-08-2020 ರಂದು ಚಾಸಾ-13 ರವರ ಕಚೇರಿಯಲ್ಲಿ ಚಾಸಾ-9 ರವರು ತಂದು ಹಾಜರುಪಡಿಸಿದ ಒಡವೆಗಳನ್ನು ಚಾಸಾ-13 ರವರು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಅದೇ ದಿನ ನಾನು ಪಿರ್ಯಾದಿ, ಚಾಸಾ-2 ಮತ್ತು 8 ರವರ ಮರುಹೇಳಿಕೆ ಪಡೆದಿರುತ್ತೇನೆ.

ಈ ಪ್ರಕರಣದ ಕಳುವು ಮಾಲನ್ನು ಚಾಸಾ-13 ರವರು ಅಮಾನತ್ತುಪಡಿಸಿಕೊಂಡಿದ್ದರಿಂದ ದಿನಾಂಕ 05-011-2020 ರಂದು ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ತನಿಖೆಯ ಕಾಲಕ್ಕೆ ಆರೋಪಿತರನ್ನು ನೋಡಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಡಾರಿಯವರಿಂದಃ**

ದೂರನ್ನು ಪಿರ್ಯಾದುದಾರರೇ ಬರೆದುಕೊಂಡು ತಂದಿದ್ದರು. ದೂರಿನ ಬಗ್ಗೆ ಪಿರ್ಯಾದಿಯ ಬಳಿ ವಿಚಾರಣೆ ಮಾಡಿರುತ್ತೇನೆ. ಸ್ಥಳ ಪಂಚನಾಮೆಯ ಕಾಲಕ್ಕೆ ಪಂಚರನ್ನು ನಾನು ಸ್ಥಳದಲ್ಲಿಯೇ ಬರಮಾಡಿಕೊಂಡಿರುತ್ತೇನೆ. ಠಾಣೆಗೆ ಕರೆಸಿರಲಿಲ್ಲ. ಪಂಚರು ಸ್ಥಳೀಯರು. ಸ್ಥಳ ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ಕಳ್ಳತನದ ಬಗ್ಗೆ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸ್ಥಳ ಪಂಚನಾಮೆಯ ಕಾಲಕ್ಕೆ ಮುರಿದು ಹೋಗಿದ್ದ ಚಿಲಕವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪಿರ್ಯಾದಿಯ ಮನೆಯ ಬಾಗಿಲಿಗೆ ಮನೆ ನಂಬರ್ ಪ್ಲೇಟ್ ಅಳವಡಿಸಿದ್ದರು ಎಂದರೆ ಅದನ್ನು ನಾನು ನೋಡಲಿಲ್ಲ ಎನ್ನುತ್ತಾರೆ. ಪಿರ್ಯಾದಿಯ ಮನೆಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ನಿಪಿ-3 ಮತ್ತು 4 ಪಿರ್ಯಾದಿಯ ಮನೆಯ ಫೋಟೋಗಳಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಪಂಚನಾಮೆಯ ಕಾಲಕ್ಕೆ ಪಂಚರನ್ನು ಠಾಣೆಗೆ ಕರೆಸಿಕೊಂಡು ಅವರಿಗೆ ಮಾಹಿತಿ ನೀಡಿ ನಂತರ ಪಿರ್ಯಾದಿಯ ಮನೆಗೆ ಹೋಗಿರುತ್ತೇನೆ. ನಿಪಿ-1 ರ ಪಂಚನಾಮೆಯ ಕಾಲಕ್ಕೆ ನಾನು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಚಾಸಾ-1 ರವರ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-1(ಸಿ) ಫೋಟೋ ಪಿರ್ಯಾದಿ ಮನೆಗೆ

ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಿಂದ ನಾನು ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಅನುಕೂಲಕ್ಕೆ ತಕ್ಕಂತೆ ಹೇಳಿಕೆ ಮತ್ತು ಮರುಹೇಳಿಕೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ–9 ರವರು ಚಾಸಾ–13 ರವರ ಕಚೇರಿಯಲ್ಲಿ ಯಾವುದೇ ಒಡವೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**